

بسم اللهِ الرّحمٰنِ الرّحيم

# ತಾನು ಮಾಡಿದ ಕೆಲಸಗಳ ಬಗ್ಗೆ ಲೆಕ್ಕ ನೀಡಬೇಕಾದ ನಾಳೆಯ ಕುರಿತು ಚಿಂತಿಸಬೇಕಾದುದು ಪ್ರತಿಯೊಬ್ಬ ಸತ್ಯವಿಶ್ವಾಸಿಯ ಕರ್ತವ್ಯವಾಗಿದೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **06-03-2015** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್ ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:*

يَاأَيُّهَا الَّذِينَ آمَنُوا اتَّقُوا اللَّهَ وَلْتَنْظُرْ نَفْسٌ مَا قَدَّمَتْ لِغَدٍ وَاتَّقُوا اللَّهَ إِنَّ اللَّهَ خَبِيرٌ بِمَا تَعْمَلُونَ

وَلاَ تَكُونُوا كَالَّذِينَ نَسُوا اللَّهَ فَأَنْسَاهُمْ أَنْفُسَهُمْ أُوْلَئِكَ هُمُ الْفَاسِقُونَ

*ಯಾ ಅಯ್ಯುಹಲ್ಲಝೀನ ಆಮನೂತ್ತಖುಲ್ಲಾಹ, ವಲ್ ತನ್‌ಝುರ್ ನಫ್‌ಸುನ್ ಮಾ ಖದ್ದಮತ್ ಲಿಗದಿನ್ ವತ್ತಖುಲ್ಲಾಹ, ಇನ್ನಲ್ಲಾಹ ಖಬೀರುನ್ ಬಿಮಾ ತಅ್‌ಮಲೂನ್. ವಲಾ ತಕೂನೂ ಕಲ್ಲಝೀನ ನಸುಲ್ಲಾಹ ಫ ಅನ್‌ಸಾಹುಮ್ ಅನ್‌ಫುಸಹುಮ್ ಉಲಾಯಿಕ ಹುಮುಲ್ ಫಾಸಿಖೂನ್.*

**"ಎಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಭಯಪಡಿರಿ. ನಾಳೆಗೋಸ್ಕರ ತಾನು ಏನನ್ನು ಸಿದ್ಧಪಡಿಸಿಟ್ಟಿದೆ ಎಂದು ಪ್ರತಿಯೊಂದು ಆತ್ಮವೂ ನೋಡಿಕೊಳ್ಳಲಿ. ನೀವು ಅಲ್ಲಾಹನ ಭಯಭಕ್ತಿ ಇರಿಸಿಕೊಳ್ಳಿರಿ. ನೀವು ಮಾಡುವುದನ್ನೆಲ್ಲ ಖಂಡಿತವಾಗಿಯೂ ಅಲ್ಲಾಹನು ಚೆನ್ನಾಗಿ ತಿಳಿಯುವವನಾಗಿದ್ದಾನೆ. ಅಲ್ಲಾಹನನ್ನು ಮರೆತುಬಿಟ್ಟವರಂತೆ ನೀವು ಆಗಬೇಡಿರಿ. ತತ್ಫಲವಾಗಿ ಅವರು ತಮ್ಮನ್ನೇ ಮರೆತು ಬಿಡುವಂತೆ ಅವನು(ಅಲ್ಲಾಹನು)ಮಾಡಿದ್ದನು. ಅವರೇ ಆಜ್ಞೋಲ್ಲಂಘಕರಾಗಿದ್ದಾರೆ."** (ಪವಿತ್ರ ಖುರ್‌ಆನ್ 59: 19,20)

ಸಾಮಾನ್ಯವಾಗಿ ಕಂಡುಬರುವುದೇನೆಂದರೆ ಪ್ರತಿಯೊಂದು ಕೆಟ್ಟ ಕೆಲಸದ ಬೇರು ಆ ಕೆಟ್ಟ ಕೆಲಸ ಮತ್ತು ಪಾಪವನ್ನು ತೀರಾ ಸಾಮಾನ್ಯವಾದುದೆಂದು ಗಣಿಸಿ ಅದನ್ನು ಮಾಡದಂತೆ ಪ್ರಯತ್ನ ಮಾಡದಿರುವುದೇ ಆಗಿದೆ. ಅಥವಾ ಅದರ ಬಗ್ಗೆ ಗಮನ ಹರಿಸದಿರುವುದಾಗಿದೆ. ಆದರೆ ಈ ನಿರ್ಲಕ್ಷ್ಯತೆಯೇ ನಂತರ ಮನುಷ್ಯನನ್ನು ದೊಡ್ಡ ಪಾಪ ಕೃತ್ಯಗಳನ್ನು ಮಾಡುವಂತೆ ಪ್ರೇರೇಪಿಸುತ್ತದೆ. ಏಕೆಂದರೆ ಆಗ ಮನುಷ್ಯನು ಮೆಲ್ಲಮೆಲ್ಲಗೆ ಒಳಿತುಗಳನ್ನು ಮರೆತು ಬಿಡುತ್ತಾನೆ. ಒಬ್ಬ ಸತ್ಯವಿಶ್ವಾಸಿ ಒಳಿತುಗಳನ್ನು ಗಳಿಸಬೇಕಾದ ಮಾನದಂಡವನ್ನು ಅವನು ಮರೆತು ಬಿಡುತ್ತಾನೆ. ಅಲ್ಲಾಹನ ಬಗ್ಗೆ ಭಯ ಕಡಿಮೆ ಆಗುತ್ತದೆ. ನಾನು ಪಠಿಸಿದ ಪವಿತ್ರ ಖುರ್‌ಆನ್ ವಚನಗಳಲ್ಲಿ ಅಲ್ಲಾಹನು ಸತ್ಯವಿಶ್ವಾಸಿಗಳೊಂದಿಗೆ ಬಹಳ ಒತ್ತಿ ಹೇಳುತ್ತಾನೆ– ನೀವು ಈ ದಿನದ, ಈ ಲೋಕದ ಆಟ ವಿನೋದಗಳ, ಸುಖ ಸೌಕರ್ಯಗಳ ಅಥವಾ ಸಂಬಂಧಿಕರ ಮತ್ತು ಸ್ನೇಹಿತರ ಬಗ್ಗೆ ಮಾತ್ರ ಯೋಚಿಸಿದರೆ ಸಾಕಾಗಲಾರದು; ನೀವು ಚಿಂತಿಸಬೇಕಾದುದು ನಾಳೆಯ ದಿನದ ಬಗ್ಗೆಯಾಗಿದೆ ಎಂದು. ಅಲ್ಲಾಹನೊಂದಿಗೆ ನಿಮಗಿರುವ ವಿಶ್ವಾಸದ ಮಟ್ಟ ಹೇಗಿದೆ ಎಂದು ಚಿಂತಿಸುವುದು ಅವನ ಬಗ್ಗೆ ಭಯಭಕ್ತಿ ಹೊಂದುವುದು ನಿಮ್ಮ ಮುಖ್ಯ ಆದ್ಯತೆ ಮತ್ತು ಚಿಂತೆ ಆಗಬೇಕಾಗಿದೆ. ನೀವು ಮರಣಾನಂತರದ ಪರಲೋಕ ಜೀವಿತ ಮತ್ತು ನಿಮ್ಮ ಇಹಲೋಕದ ಕೆಲಸಗಳ ಲೆಕ್ಕಾಚಾರದ ಬಗ್ಗೆ ನಂಬಿಕೆ ನಿಮ್ಮ ಯೋಚನೆಗಳ ಕೇಂದ್ರವಾಗಿರಬೇಕಾದುದು ಆವಶ್ಯಕವಾಗಿದೆ. ನೀವು ಹೀಗೆ ವರ್ತಿಸುವುದಾದರೆ ಮಾತ್ರ ನಿಮ್ಮ ವಾಸ್ತವಿಕ ಸ್ವಭಾವ ಗುಣಗಳಲ್ಲಿ ಅಭಿವೃದ್ಧಿ ಉಂಟಾಗುವುದು. ಆಗ ನೀವು ಕೇವಲ ತೋರಿಕೆಯ ಸಜ್ಜನರಾಗಿರುವುದಿಲ್ಲ. ಆಗ ನೀವು ಅಲ್ಲಾಹನ ಸಂಪ್ರೀತಿ ಗಳಿಸಲು ಸತ್ಕರ್ಮನಿರತರಾಗುವಿರಿ. ನೀವು ನಿಮ್ಮ ನಾಳೆಯ ದಿನದ ಬಗ್ಗೆ ದೃಷ್ಟಿ ಇರಿಸುವಾಗ ಮಾತ್ರವೇ ನಿಮ್ಮ ಆಧ್ಯಾತ್ಮಿಕ ಅಭಿವೃದ್ಧಿ ಸಾಧ್ಯವಾಗುವುದು ಮತ್ತು "ನಾನು ಸತ್ಯವಿಶ್ವಾಸಿ" ಎಂದು ಹೇಳುವುದು ವಾಸ್ತವಿಕವಾಗುವುದು. ನಿಸ್ವಾರ್ಥವಾದ ಮತ್ತು ಸತ್ಯಸಂಧವಾದ ನಿಮ್ಮ ವಿಶ್ವಾಸ ಅಲ್ಲಾಹನ ದೃಷ್ಟಿಯಲ್ಲಿ ವಾಸ್ತವಿಕವಾದುದಾಗಬೇಕಾದರೆ ನೀವು ನಾಳೆಯ ದಿನವನ್ನು ನಿಮ್ಮ ಎದುರಿಗಿರಿಸಿ ಅಲ್ಲಾಹನ ಸಂಪ್ರೀತಿ ಗಳಿಸಲು ಪ್ರಯತ್ನ ಮಾಡುತ್ತಾ ಇರಬೇಕು ಮತ್ತು ಅಲ್ಲಾಹನ ಆಜ್ಞೆಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತಾ ಇರಬೇಕು.

ಅಲ್ಲಾಹನ ಈ ಆಜ್ಞೆಯನ್ನು ನಮ್ಮ ಪೈಕಿ ಪ್ರತಿಯೊಬ್ಬನೂ ಬಹಳ ಗಾಢವಾಗಿ ಯೋಚಿಸಿ ಮನವರಿಕೆ ಮಾಡಿಕೊಳ್ಳುವ ಆವಶ್ಯಕತೆ ಇರುತ್ತದೆ. ನಾವು ಅಲ್ಲಾಹನಿಗೆ ಭಯಪಟ್ಟುಕೊಂಡು ನಮ್ಮ ಅನುಷ್ಠಾನ ಕರ್ಮಗಳ ಕಡೆಗೆ ದೃಷ್ಟಿ ಇರಿಸಿ ಅವು ನಮ್ಮ ನಾಳೆಯ ದಿನವನ್ನು ಸರಿಪಡಿಸುವವುಗಳಾಗುವಂತೆ ಮಾಡಿಕೊಳ್ಳಬೇಕು. ಅಲ್ಲಾಹನು ನಮ್ಮ ಹೃದಯಗಳ ಪಾತಾಳದ ತನಕ ದೃಷ್ಟಿ ಇರಿಸುವವನಾಗಿದ್ದಾನೆ. ಅವನಿಗೆ ನಮ್ಮ ಬಗ್ಗೆ ಎಲ್ಲವೂ ತಿಳಿದಿದೆ. ಮೇಲಿಂದ ಮೇಲೆ ಹೇಳುವ ಮಾತುಗಳಿಂದ ಅಲ್ಲಾಹನನ್ನು ಮೋಸಗೊಳಿಸಲು ಸಾಧ್ಯವಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದಂತೆ– ಅಲ್ಲಾಹನು ಖೋಟಾ ಮತ್ತು ಖರೆ(ನಕಲಿ ಮತ್ತು ಅಸಲಿ)ಗಳನ್ನು ವ್ಯತ್ಯಾಸ ಪಡಿಸಿ ತಿಳಿದುಕೊಳ್ಳಬಲ್ಲವನಾಗಿದ್ದಾನೆ. ಅವನು ಖೋಟಾ ಕೆಲಸಗಳನ್ನು ಅಂಗೀಕರಿಸಲಾರನು. ಆದುದರಿಂದ ಒಬ್ಬ ಸತ್ಯವಿಶ್ವಾಸಿ ಬಹಳ ಚಿಂತಿತನಾಗಿರಬೇಕಾದುದು ಆವಶ್ಯಕವಾಗಿದೆ. ತಾನು ಮಾಡಿದ ಕೆಲಸಗಳ ಬಗ್ಗೆ ಲೆಕ್ಕ ನೀಡಬೇಕಾದ ನಾಳೆಯ ದಿನದ ಬಗ್ಗೆ ಚಿಂತಾಮಗ್ನನಾಗಬೇಕಾಗಿದೆ. ಅವಿಶ್ವಾಸಿಗಳ ಹಾಗೆ ನಾವು ಇಹಲೋಕ ಮಾತ್ರ ಎಲ್ಲವೂ ಆಗಿದೆ ಎಂದು ಭಾವಿಸಬಾರದು. ನಾವು ವಾಸ್ತವಿಕ ಜಯಗಳಿಸಲು ತಖ್ವ (ಭಯಭಕ್ತಿ) ಅವಲಂಬಿಸಿ ವರ್ತಿಸಬೇಕಾಗಿದೆ.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳಿದ್ದಾರೆ: "ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಜಯಗಳಿಸುವ ಒಂದು ಉಪಾಯವನ್ನು ಅಲ್ಲಾಹನು ನಮಗೆ ಕಲಿಸಿದ್ದಾನೆ. ಮನುಷ್ಯನು ನಾಳೆಯ ದಿನದ ಬಗ್ಗೆ ಇಂದು ಚಿಂತಿಸಬೇಕು. ಹಾಗೆ ಮಾಡಿದರೆ ಇಹಲೋಕದಲ್ಲೂ ಪರಲೋಕದಲ್ಲೂ ಸುಖ

ಸಿಗುವುದು. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ– **ವಲ್ ತನ್‌ಝುರ್ ನಫ್ಸುನ್ ಮಾ ಖದ್ದಮತ್ ಲಿಗದಿನ್.** ನಾಳೆಗೋಸ್ಕರ ತಾನು ಏನನ್ನು ಸಿದ್ಧಪಡಿಸಿಟ್ಟಿದೆ ಎಂದು ಪ್ರತಿಯೊಂದು ಆತ್ಮವೂ ನೋಡಿಕೊಳ್ಳಲಿ ಎಂದು. ಈ ಪವಿತ್ರ ಖುರ್‌ಆನ್ ವಚನ ಪ್ರಕಾರ ವರ್ತಿಸಿದರೆ ಮನುಷ್ಯನು ಇಹಲೋಕದಲ್ಲಿ ಜಯಶಾಲಿ ಆಗುತ್ತಾನಲ್ಲದೆ ಪರಲೋಕದಲ್ಲಿಯೂ ಅಲ್ಲಾಹನ ಅನುಗ್ರಹಗಳಿಸುತ್ತಾನೆ. ನಾವು ಪರಲೋಕಕ್ಕೋಸ್ಕರ ಜೀವನಾಧಾರ ಜಮಾಯಿಸಲು ಇಂದಿನಿಂದಲೇ ಸಿದ್ಧತೆಗಳನ್ನು ಪ್ರಾರಂಭಿಸದಿದ್ದರೆ ಅದು ಸಾಧ್ಯವಾಗದು.''

ಪವಿತ್ರ ಖುರ್‌ಆನಿನ ಈ ವಚನವನ್ನು ನಿಕಾಹ್ ಖುತ್‌ಬಗಳಲ್ಲಿಯೂ ನಾವು ಓದುತ್ತೇವೆ. ನಿಕಾಹ್ ಸಂದರ್ಭದಲ್ಲಿ ಓದಲ್ಪಡುವ ವಿವಿಧ ಪವಿತ್ರ ಖುರ್‌ಆನ್ ವಚನಗಳಲ್ಲಿ ವಿವಿಧ ವಿಷಯಗಳ ಬಗ್ಗೆ ಗಮನ ಹರಿಸುವಂತೆ ಅಲ್ಲಾಹನು ಮಾಡಿದ್ದಾನೆ. ಅಲ್ಲಾಹನು ಹೇಳಿದ್ದಾನೆ– ನೀವು ನಿಮ್ಮ ರಕ್ತ ಸಂಬಂಧಿಗಳ ಬಗ್ಗೆ ಶ್ರದ್ಧೆ ವಹಿಸಿರಿ. ಅವರೊಂದಿಗೆ ವಿವಾಹ ಬಂಧನದ ಮೂಲಕ ಹೊರಿಸಲ್ಪಡುವ ಜವಾಬ್ದಾರಿಗಳ ಬಗ್ಗೆ ಸಹ ಶ್ರದ್ಧೆ ವಹಿಸಿರಿ. ಸತ್ಯವನ್ನು ಅವಲಂಬಿಸಿರಿ. ಅದರ ಮೂಲಕ ಒಳ್ಳೆಯ ಕೆಲಸ ಮಾಡಲು ಮತ್ತು ಕುಟುಂಬ ಸಂಬಂಧ ನಿಭಾಯಿಸಲು ಭಾಗ್ಯ ಲಭಿಸುತ್ತದೆ. ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳನ್ನು ಪಾಲಿಸಿ ನಡೆಯಿರಿ. ಅದರ ಮೂಲಕ ನೀವು ಯಶಸ್ವೀ ಜೀವಿತಗಳಿಸುವಿರಿ.

ಆದುದರಿಂದ ಚಿಕ್ಕಪುಟ್ಟ ವಿಷಯಗಳಿಗೋಸ್ಕರ ತಮ್ಮ ಮನೆ ಅಥವಾ ಕುಟುಂಬಗಳನ್ನು ನಾಶಮಾಡುವವರು ಅಲ್ಲಾಹನ ಆಜ್ಞೆಗಳ ಬಗ್ಗೆ ಚಿಂತಿಸಿ ಅವುಗಳನ್ನು ಅನುಷ್ಠಾನಕ್ಕೆ ತರುವುದಾದರೆ ಅವರು ತಮ್ಮ ಮನೆಗಳ ನೆಮ್ಮದಿಗೆ ಖಾತರಿ ನೀಡುವವರಾಗುವರಲ್ಲದೆ ತಮ್ಮ ಮಕ್ಕಳಿಗೆ ಸರಿಯಾಗಿ ತರಬೇತಿ ನೀಡುವವರೂ ಅವರನ್ನು ತಖ್ವವನ್ನು ಅವಲಂಬಿಸಿ ನಡೆಯಲು ಮಾರ್ಗದರ್ಶನ ನೀಡುವವರೂ ಅವರ ಜೀವನವನ್ನು ಸುಧಾರಣೆ ಮಾಡುವವರೂ ಅಲ್ಲಾಹನ ಅನುಗ್ರಹಗಳನ್ನು ಇಹಲೋಕದಲ್ಲೂ ಪರಲೋಕದಲ್ಲೂ ಗಳಿಸುವವರೂ ಆಗುವರು. ಮುಂದಿನ ಪೀಳಿಗೆ ಕೇವಲ ನಿಮ್ಮ ಮಕ್ಕಳಲ್ಲ. ಅವರು ಜಮಾಅತಿನ ಭಂಡವಾಳ ಸಹ ಆಗಿದ್ದಾರೆ. ಅವರಿಗೆ ನೇರಮಾರ್ಗ ತೋರಿಸುವುದು ತಂದೆ ತಾಯಂದಿರ ಕೆಲಸವಾಗಿದೆ. ಆದರೆ ತಂದೆ ತಾಯಂದಿರು ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳ ಪ್ರಕಾರ ತಮ್ಮನ್ನು ಚಲಾಯಿಸಲು ಪ್ರಯತ್ನಿಸುವವರಾದರೆ ಮಾತ್ರ ಇದು ಸಾಧ್ಯವಾಗುವುದು. ಅಲ್ಲಾಹನು ಎಲ್ಲರಿಗೂ ಈ ಭಾಗ್ಯ ದಯಪಾಲಿಸಲಿ.

ನಮ್ಮ ಜೀವಿತದಲ್ಲಿ ಅಸಂಖ್ಯಾತ ಸಂದರ್ಭಗಳಲ್ಲಿ ನಾವು ತಖ್ವವನ್ನು(ಭಯಭಕ್ತಿಯನ್ನು) ಅನುಸರಿಸಿ ವರ್ತಿಸುವುದಿಲ್ಲ. ನಾವು ಪರಲೋಕದ ಬಗ್ಗೆ ದೃಷ್ಟಿ ಇರಿಸುವುದಿಲ್ಲ. ಲೌಕಿಕ ಸಾಧನ ಸಂಪತ್ತುಗಳು ಮತ್ತು ಆವಶ್ಯಕತೆಗಳು ಮಾತ್ರ ಎಲ್ಲವೂ ಆಗಿವೆ ಎಂದು ನಾವು ಭಾವಿಸುತ್ತೇವೆ. ಅಲ್ಲಾಹನ ಆಶ್ರಯಕ್ಕಿಂತ ಲೌಕಿಕ ಆಶ್ರಯದ ಬಗ್ಗೆಯೇ ನಾವು ಆದ್ಯತೆ ನೀಡುತ್ತೇವೆ. ಈ ನಮ್ಮ ಬಲಹೀನತೆ, ನಮ್ಮ ಅಯೋಗ್ಯತೆ ಮತ್ತು ಸೋಮಾರಿತನದಿಂದ ನಾವು ಇಹಲೋಕದ ಭವಿಷ್ಯತ್ತನ್ನೂ ಕೆಡಿಸುತ್ತೇವೆ. ಇಹಲೋಕದ ನಾಳೆಯ ದಿನವನ್ನು ಹಾಳು ಮಾಡುತ್ತೇವಲ್ಲದೆ ಪರಲೋಕದ ನಾಳೆಯ ದಿನವನ್ನು ಸಹ ಕಡೆಗಣಿಸುತ್ತೇವೆ. ಇದರಿಂದ ಎಂತಹ ಭಯಾನಕ ಪರಿಣಾಮಗಳು ಉಂಟಾಗುತ್ತದೆ ಎಂದು ನಾವು ಯೋಚಿಸುವುದೇ ಇಲ್ಲ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು ಒಮ್ಮೆ ಸಂಕ್ಷಿಪ್ತ ಶಬ್ದಗಳಲ್ಲಿ ಹೀಗೆ ಹೇಳಿದರು: ''ಸತ್ಯವಿಶ್ವಾಸಿ ತಾನು ಒಂದು ಕೆಲಸ ಮಾಡುವ ಮೊದಲು ಅದರ ಪರಿಣಾಮ ಏನಾಗುವುದೆಂದು ಮೊದಲೇ ಯೋಚಿಸಬೇಕು. ಮನುಷ್ಯನು ಕೆಲವೊಮ್ಮೆ ಸಿಟ್ಟಿನಿಂದ ಕೊಲೆಯನ್ನು ಸಹ ಮಾಡಿಬಿಡುತ್ತಾನೆ. ಆದರೆ ಅದರ ಪರಿಣಾಮ ಏನಾಗುವುದೆಂದು ಯೋಚಿಸಬೇಕು.''

ಈ ತತ್ವವನ್ನು ಪಾಲಿಸಿದರೆ ಭಯಭಕ್ತಿಯಿಂದ ವರ್ತಿಸಲು ಸಾಧ್ಯವಾಗುವುದು. ನಾವು ಪರಿಶೀಲಿಸುವುದಾದರೆ ಎಲ್ಲಾ ಕೆಟ್ಟ ಕೆಲಸಗಳನ್ನು ಎಲ್ಲಾ ಪಾಪಗಳನ್ನು ಮಾಡುವಾಗ ನಮ್ಮ ಮೆದುಳಿನಲ್ಲಿ ಒಬ್ಬ ದುರ್ಬೋಧಕನಾದ ಶೈತಾನನು ನುಗ್ಗಿರುತ್ತಾನೆ. ಆಗ ಪರಿಣಾಮವನ್ನು ಲೆಕ್ಕಿಸದೆ ಕೆಲಸ ಮಾಡಲಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಅಲ್ಲಾಹನು ಪವಿತ್ರ ಖುರ್‌ಆನಿನ ಮೂಲಕ ಸತ್ಯವಿಶ್ವಾಸಿಗಳೆಂದು ವಾದಿಸುವವರನ್ನು ಎಚ್ಚರಿಸುತ್ತಿದ್ದಾನೆ: ನಾಳೆಯ ಬಗ್ಗೆ ದೃಷ್ಟಿ ಇರಿಸುವುದು ಸತ್ಯ ವಿಶ್ವಾಸಿಯ ಚಿಹ್ನೆ ಆಗಿದೆ ಎಂದು.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ (ಪ್ರಥಮ ಖಲೀಫರು) ಇದರ ಬಗ್ಗೆ ಹೀಗೆ ಹೇಳುತ್ತಾರೆ: ''ಎಲ್ಲವನ್ನೂ ಅರಿತುಕೊಳ್ಳುವ ಎಲ್ಲಾ ವಿಷಯಗಳ ಬಗ್ಗೆ ಸಮಾಚಾರ ಗಳಿಸುವ ಒಬ್ಬ ದೊರೆ ಇದ್ದಾನೆ, ಅವನು ಎಲ್ಲಾ ವಿಧಗಳ ಕೆಟ್ಟಕೆಲಸ, ವಂಚನೆ, ಸೋಮಾರಿತನ, ಮೊದಲಾದವುಗಳನ್ನು ನೋಡುತ್ತಾನೆ ಮತ್ತು ಅವನು ಅದಕ್ಕೆ ಶಿಕ್ಷೆ ನೀಡುತ್ತಾನೆ ಎಂಬ ದೃಢ ನಂಬಿಕೆ ಹೊಂದುವುದಾದರೆ ಜನರು ದುಷ್ಕೃತ್ಯಗಳಿಂದ ಸುರಕ್ಷಿತರಾಗುವರು. ಇಂತಹ ದೃಢ ನಂಬಿಕೆ ಮನುಷ್ಯರು ಹೊಂದಬೇಕು.'' ಕೆಲವು ಜನರು ಲೌಕಿಕ ಕಾರ್ಯಗಳಲ್ಲೂ ಉದಾಸೀನತೆ ತೋರಿಸುತ್ತಾರೆ. ಅವರು ತಮ್ಮ ಕರ್ತವ್ಯ ಈಡೇರಿಸುವುದಿಲ್ಲ. ಇಂತಹ ಜನರು ತಮ್ಮ ನಾಳೆಯ ದಿನವನ್ನು ಸಹ ಕೆಡಿಸುತ್ತಾರೆ. ಅವರು ಕೆಲಸ ಮಾಡದೆ ಗಳಿಸಿದ ಸಂಪಾದನೆ ಸಹ ಧರ್ಮ ಬದ್ಧವಲ್ಲ. ಅದು ವಂಚನೆಯ ಸಂಪಾದನೆಯಾಗಿದೆ. ಆದುದರಿಂದ ನಾಳೆಯ ದಿನದ ಬಗ್ಗೆ ದೃಷ್ಟಿ ಇರಿಸಲು ಹೇಳುವ ಪವಿತ್ರ ಖುರ್‌ಆನ್‌ನ ಈ ವಚನವು ಬಹಳ ವಿಶಾಲವಾದ ಅರ್ಥವನ್ನು ಹೊಂದಿದೆ. ಅದು ನೈಜ ಸತ್ಯವಿಶ್ವಾಸಿಯ ಪಾದವನ್ನು ಹಿಡಿದಿಟ್ಟು ಚಿಕ್ಕಪುಟ್ಟ ಬಲಹೀನತೆ ಅಥವಾ ಪಾಪದ ಕಡೆಗೆ ಹೆಜ್ಜೆ ಹಾಕುವುದನ್ನು ಸಹ ತಡೆಯುತ್ತದೆ.

ಸತ್ಯವಿಶ್ವಾಸಿಗಳೊಡನೆ ನಾಳೆಯ ದಿನದ ಬಗ್ಗೆ ದೃಷ್ಟಿ ಇರಿಸಲು ಹೇಳಿ ಮನೆಯಿಂದ ಹಿಡಿದು ಸಾಮಾಜಿಕ, ವ್ಯವಹಾರಿಕ, ರಾಷ್ಟ್ರೀಯ ಅಂತಾರಾಷ್ಟ್ರೀಯ, ಮೊದಲಾದ ಎಲ್ಲ ವಿಷಯಗಳಲ್ಲೂ ಭಯಭಕ್ತಿಯಿಂದ ವರ್ತಿಸಲು ಆದೇಶಿಸಲಾಗಿದೆ. ಭಯಭಕ್ತಿಯಿಂದ ವರ್ತಿಸದವನು ಅಲ್ಲಾಹನ ಹಿಡಿತಕ್ಕೆ ಪಾತ್ರನಾಗುವನು ಎಂದು ತಿಳಿದುಕೊಳ್ಳಬೇಕಾಗಿದೆ. ಲೌಕಿಕ ವ್ಯವಹಾರಗಳಿಗೆ ಧರ್ಮದೊಂದಿಗೆ ಸಂಬಂಧವಿಲ್ಲ ಎಂದು ಮನುಷ್ಯರು ಭಾವಿಸಬಾರದು.

ಒಟ್ಟಿನಲ್ಲಿ ಸತ್ಯವಿಶ್ವಾಸಿ ತಖ್ವದಿಂದ(ಭಯಭಕ್ತಿಯಿಂದ) ವರ್ತಿಸಬೇಕೆಂದು ಆಜ್ಞಾಪಿಸಲಾಗಿದೆ. ಎಲ್ಲ ಧಾರ್ಮಿಕ ಮತ್ತು

ಲೌಕಿಕ ಕೆಲಸಗಳನ್ನು ಅಲ್ಲಾಹನ ಮಾರ್ಗದರ್ಶನ ಪ್ರಕಾರ ಈಡೇರಿಸುವುದು ತಖ್ವದಲ್ಲಿ ಸೇರಿದೆ. ಮೋಸಮಾಡಿ ಲಾಭಪಡೆಯುವುದು ಧರ್ಮ ಮತ್ತು ಸತ್ಯ ವಿಶ್ವಾಸದಿಂದ ದೂರಕ್ಕೆ ಕೊಂಡೊಯ್ಯುವ ಸಂಗತಿಯಾಗಿದೆ ಎಂದು ನೆನಪಿಡಬೇಕು. ಲೌಕಿಕವಾದ ವ್ಯವಹಾರ ಧಾರ್ಮಿಕ ಪರೀಕ್ಷೆಯಾಗುತ್ತದೆ. ನಾನು ಹಿಂದೆ ಹೇಳಿದ ಹಾಗೆ ಮೆಲ್ಲಮೆಲ್ಲಗೆ ಅದು ಧರ್ಮದಿಂದಲೂ ಅಲ್ಲಾಹನಿಂದಲೂ ದೂರಕ್ಕೆ ಕೊಂಡೊಯ್ಯುತ್ತದೆ. ಸತ್ಯವಿಶ್ವಾಸಿ ಯಾವಾಗಲೂ ನೆನಪಿಡಬೇಕಾದುದೇನೆಂದರೆ ವಿಶ್ವಾಸಕ್ಕೆ ಸಂಬಂಧಿಸಿದ ಪರೀಕ್ಷೆ ಲೌಕಿಕ ಪರೀಕ್ಷೆಗಳಿಗಿಂತ ಬಹಳ ದೊಡ್ಡದಾಗಿರುತ್ತದೆ. ಅದರ ಪರಿಣಾಮವಾಗಿ ಇಹಲೋಕ ಮತ್ತು ಪರಲೋಕ ಎರಡೂ ನಾಶವಾಗುತ್ತವೆ.

ಆದುದರಿಂದ ನಾವು ಯಾವಾಗಲೂ ಈ ಬಗ್ಗೆ ಯೋಚಿಸುತ್ತಾ ನಮ್ಮ ಹೃದಯಗಳನ್ನು ಪರಿಶೀಲಿಸುತ್ತಾ ಇರಬೇಕು. ಪ್ರತಿಯೊಂದು ಕೆಲಸದ ಪರಿಣಾಮದ ಬಗ್ಗೆ ದೃಷ್ಟಿ ಇರಿಸಬೇಕು. ಏಕೆಂದರೆ "ಅಲ್ಲಾಹನು ನನ್ನ ಪ್ರತಿಯೊಂದು ಕೆಲಸ ನೋಡುತ್ತಾನ್" ಎಂದು ತಿಳಿದುಕೊಳ್ಳಬೇಕು. ನಮ್ಮ ಪೈಕಿ ಪ್ರತಿಯೊಬ್ಬನು ಹೀಗೆ ಯೋಚಿಸಿ ತನ್ನ ಕಡ್ಡಾಯ ಕರ್ತವ್ಯಗಳನ್ನು ಜವಾಬ್ದಾರಿಗಳನ್ನೂ ಈಡೇರಿಸುವುದಾದರೆ ಮತ್ತು ಅದಕ್ಕೋಸ್ಕರ ಪ್ರಯತ್ನ ಮಾಡುವುದಾದರೆ ನಮ್ಮ ಜಮಾಅತಿನ ತಖ್ವದ ಮಟ್ಟ ಉನ್ನತವಾಗುವುದು. ಮತ್ತು ಜಮಾಅತ್‌ನ ತಖ್ವದ ಮಟ್ಟ ಸಹ ಉನ್ನತವಾದುದು ತಾನಾಗಿ ಕಾಣಲು ತೊಡಗುವುದು. ಇದರಿಂದ ತರಬೇತಿ ವಿಭಾಗದಲ್ಲಿ ಕಷ್ಟ ನಿವಾರಣೆಯಾಗುವುದು. **ಉಮೂರೆಆಮ್ಮ** ಮತ್ತು **ಖಝಾ** ವಿಭಾಗದ ಸಮಸ್ಯೆಗಳು ಸಹ ನಿವಾರಣೆಯಾಗುವುದು. ನೆನಪಿಸುವ ಅಗತ್ಯವಿರಲಾರದು. ನಿಮ್ಮ ಹೃದಯಗಳನ್ನು ಯಾವಾಗಲೂ ಬೆಳಗ್ಗೆ ಸಾಯಂಕಾಲ ಪರಿಶೀಲನೆ ಮಾಡುತ್ತಾ ಇರಬೇಕು. ಶೈತಾನನ ಆಕ್ರಮಣಗಳಿಂದ ಆತ್ಮಗಳನ್ನು ರಕ್ಷಿಸಲು ಅತ್ಯಂತ ಹೆಚ್ಚು ಪ್ರಯತ್ನಿಸಬೇಕು.

'ನನ್ನ ಕೆಲಸವನ್ನು ಅಲ್ಲಾಹನು ನೋಡುತ್ತಾನೆ, ಅದರ ಪರಿಣಾಮ ಏನಾಗುವುದು?' ಎಂದು ಬಹುತೇಕ ಜನರು ಚಿಂತಿಸುವುದಿಲ್ಲ. ಅದಕ್ಕೆ ಕಾರಣವೇನೆಂದರೆ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದಂತೆ- 'ಶೈತಾನನು ರಕ್ತದೊಂದಿಗೆ ಮನುಷ್ಯನ ದೇಹದಲ್ಲಿ ಸಂಚರಿಸುತ್ತಾನೆ.'

ಅನೇಕ ರೋಗಗಳು ಮನುಷ್ಯನಿಗೆ ಹಾನಿ ಉಂಟುಮಾಡುವುದು ಹೇಗೆಂದರೆ ಯಾವುದೋ ಕಾರಣದಿಂದ ರೋಗದ ಸೋಂಕು ಶರೀರವನ್ನು ಪ್ರವೇಶಿಸಿ ರಕ್ತದಲ್ಲಿ ಹರಿದಾಡುತ್ತಿರುತ್ತದೆ. ಮೆಲ್ಲ ಮೆಲ್ಲಗೆ ಈ ಸೋಂಕು ವರ್ಧಿಸಿ ದೇಹದಲ್ಲಿ ಹೆಚ್ಚು ಹಾನಿಕರ ಪ್ರಭಾವ ಬೀರುತ್ತದೆ. ಆದರೆ ಇಂದಿನ ಕಾಲದಲ್ಲಿ ಅತ್ಯಂತ ಅಪಾಯಕರವಾದುದು ಆಧ್ಯಾತ್ಮಿಕ ರೋಗಗಳಾಗಿವೆ. ಆಧ್ಯಾತ್ಮಿಕ ರೋಗಗಳು ಇಂದಿನ ಪರಿಸರದಲ್ಲಿ ಬಹಳ ವ್ಯಾಪಕವಾಗಿವೆ. ಶೈತಾನನು ಯಾವಾಗ ತನ್ನ ರಕ್ತದಲ್ಲಿ ಪ್ರವೇಶಿಸಿದನು ಮತ್ತು ಆಧ್ಯಾತ್ಮಿಕ ರೋಗವನ್ನು ವರ್ಧಿಸುತ್ತಾ ಹೋದನು ಎಂದು ಮನುಷ್ಯನಿಗೆ ತಿಳಿಯುವುದಿಲ್ಲ. ಆದರೆ ಶೈತಾನನು ರಕ್ತದಲ್ಲಿ ಸಂಚರಿಸುವ ಮೂಲಕ ಉಂಟಾಗುವ ಆಧ್ಯಾತ್ಮಿಕ ರೋಗಗಳು ಶಾರೀರಿಕ ರೋಗಗಳಿಗಿಂತ ಹೆಚ್ಚು ಹಾನಿಕರವಾಗಿವೆ. ಶಾರೀರಿಕ ರೋಗಗಳಿಂದ ಶರೀರದ ಮೇಲೆ ಪ್ರಭಾವ ಉಂಟಾಗುವಾಗ ಮನುಷ್ಯನಿಗೆ ಅದರ ಅನುಭವ ಆಗುತ್ತದೆ. ಕೂಡಲೇ ಅವನು ಡಾಕ್ಟರರ ಬಳಿಗೆ ಹೋಗುತ್ತಾನೆ. 'ನಾನು ರೋಗಿಯಾಗಿದ್ದೇನೆ ನನಗೆ ಔಷಧಿ ಕೊಡಿರಿ' ಎಂದು ಹೇಳುತ್ತಾನೆ. ಆದರೆ, ಆಧ್ಯಾತ್ಮಿಕ ರೋಗ ಹೆಚ್ಚು ಹಾನಿಕರವಾಗುವುದು ಹೇಗೆಂದರೆ ಆಗ ಅವನು ಅಲ್ಲಾಹನಿಂದ ದೂರವಾಗಿ ಶೈತಾನನ ಆಕ್ರಮಣಗಳಿಗೆ ಒಳಗಾಗಿದ್ದರೂ ಅವನಿಗೆ ತಾನು ರೋಗಿ ಎಂದು ತಿಳಿಯುವುದಿಲ್ಲ. ಅವನು ತನ್ನನ್ನು ಸ್ವಸ್ಥನೆಂದು ಭಾವಿಸುತ್ತಾನೆ. ಆದರೆ ಅವನ ಸ್ನೇಹಿತರಿಗೂ ಅವನ ಹಿತೈಷಿಗಳಿಗೂ ಅವನ ರೋಗದ ಬಗ್ಗೆ ತಿಳಿದಿರುತ್ತದೆ. ಅವರು ಅವನ ರೋಗದ ಬಗ್ಗೆ ಅವನಿಗೆ ಹೇಳುವಾಗ ಅವನು ತನ್ನ ಸ್ನೇಹಿತರ ಮತ್ತು ಹಿತೈಷಿಗಳ ಬಗ್ಗೆ ತಪ್ಪು ಗ್ರಹಿಕೆ ಹೊಂದುತ್ತಾನೆ. ತನ್ನ ಸ್ನೇಹಿತರು ತಪ್ಪು ಹೇಳುತ್ತಾರೆಂದು ಅವನು ಭಾವಿಸುತ್ತಾನೆ. ಅವನು ತನ್ನ ಬಗ್ಗೆ ನಾನು ಸರಿಯಾಗಿದ್ದೇನೆ ಎಂದೇ ಯೋಚಿಸುತ್ತಾನೆ.

ರೋಗವು ಆಕ್ರಮಿಸುವ ಮೊದಲು ಸತ್ಯವಿಶ್ವಾಸಿ ಮುಂಜಾಗ್ರತೆಯ ಕ್ರಮಗಳನ್ನು ಕೈಗೊಳ್ಳಬೇಕು. ವಾತಾವರಣದಲ್ಲಿ ಆಧ್ಯಾತ್ಮಿಕ ರೋಗಗಳು ವ್ಯಾಪಕವಾಗಿ ಹಬ್ಬಿವೆ. ಆದುದರಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಲು ಸ್ಥಿರ ಪ್ರಯತ್ನಗಳನ್ನು ಮಾಡಬೇಕಾದ ಅವಶ್ಯಕತೆಯಿದೆ. ಸ್ಥಿರವಾಗಿ ಚಿಕಿತ್ಸೆ ನಡೆಸುವುದು ಸಹ ಆವಶ್ಯಕವಾಗಿದೆ. ಮುಂಜಾಗ್ರತೆ ಕ್ರಮಗಳೂ ಆವಶ್ಯಕವಾಗಿವೆ. ನಾವು ಯಾವಾಗಲೂ ನೆನಪಿಡಬೇಕಾದುದೇನೆಂದರೆ ಸತ್ಯವಿಶ್ವಾಸಿ ಅಲ್ಲಾಹನ ಭಯದಿಂದ ಎಂದೂ ವಿರಹಿತನಾಗಬಾರದು. ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಹದೀಸ್‌ಗಳಲ್ಲಿ ಹೀಗೆ ವರದಿಯಾಗಿದೆ: ಅವರು ರಾತ್ರಿ ನಿದ್ರೆಯಿಂದ ಎದ್ದಾಗಲೆಲ್ಲಾ ಅತ್ಯಂತ ವಿನಮ್ರತೆಯಿಂದ ಪ್ರಾರ್ಥನೆ ಮಾಡುತ್ತಾ ಇದ್ದರು. ಒಮ್ಮೆ ಹಝ್‌ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹಝ್‌ರತ್ ಪೈಗಂಬರರ ಈ ಸ್ಥಿತಿಯನ್ನು ಕಂಡು ಹೀಗೆ ಹೇಳಿದರು: ಅಲ್ಲಾಹನು ನಿಮ್ಮನ್ನು ಎಲ್ಲ ರೀತಿಗಳಲ್ಲಿ ಕ್ಷಮಿಸಿರುವಾಗ ನೀವು ಇಷ್ಟು ಗಾಬರಿಗೊಳ್ಳುವ ಅವಶ್ಯಕತೆಯೇನಿದೆ. ನೀವು ಇಷ್ಟು ಭಯಭೀತರಾಗಿ ಏಕೆ ಪ್ರಾರ್ಥಿಸುತ್ತಿರುವಿರಿ? ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೊದಲೇ ಹೇಳಿದ್ದರು: ಮನುಷ್ಯನ ರಕ್ತದಲ್ಲಿ ಶೈತಾನ್ ಇದ್ದಾನೆ ಆದರೆ ನನ್ನ ಶೈತಾನ್ ಮುಸ್ಲಿಮನಾಗಿದ್ದಾನೆ. ಎಂದರೆ ಯಾವುದೇ ಆಧ್ಯಾತ್ಮಿಕ ರೋಗ ಹಝ್‌ರತ್ ಪೈಗಂಬರರಿಗೆ ತಗಲುವ ಸಾಧ್ಯತೆಯೇ ಇರಲಿಲ್ಲ ಎಂಬುದಾಗಿ ಹೇಳಿದ್ದರು. ಆದರೆ, ಈ ಸಂದರ್ಭದಲ್ಲಿ ಹಝ್‌ರತ್ ಪೈಗಂಬರರು ಹೀಗೆ ಉತ್ತರ ನೀಡಿದರು: ನನಗೆ ಮೋಕ್ಷ ಸಿಗುವುದು ಸಹ ಅಲ್ಲಾಹನ ಅನುಗ್ರಹದಿಂದ ಮಾತ್ರವಾಗಿದೆ. ಆದುದರಿಂದ ಯಾವಾಗಲೂ ಅಲ್ಲಾಹನ ಕಡೆಗೆ ಬಾಗುತ್ತಾ ಇರುವುದು ಆವಶ್ಯಕವಾಗಿದೆ ಎಂದು.

ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಇಷ್ಟು ಭಯಭೀತಿ ಪ್ರಕಟಿಸುವಾಗ ಬೇರೆ ಯಾರಿಗೆ ತಾನೆ 'ನಾಳೆಯ ಬಗ್ಗೆ ಯೋಚಿಸುವ ಅಗತ್ಯ ನನಗಿಲ್ಲ; ಅಲ್ಲಾಹನ ಅನುಗ್ರಹ ಗಳಿಸುವ ಕೆಲಸ ಮಾಡುವ ಆವಶ್ಯಕತೆಯಿಲ್ಲ' ಎಂದು ಹೇಳಲು ಸಾಧ್ಯ?

ಆದುದರಿಂದ ಪ್ರತಿಯೊಂದು ಸಮಯ ಜಾಗರೂಕನಾಗಿರಬೇಕಾದ ಆವಶ್ಯಕತೆ ಇದೆ. ಸದಾ ತಖ್ವದಲ್ಲಿ ನಡೆದುಕೊಂಡು ತನ್ನ ಕೆಲಸವನ್ನು ಪರೀಕ್ಷಿಸಬೇಕಾದ ಆವಶ್ಯಕತೆ ಇದೆ. ಯಾವಾಗಲೂ ಅಲ್ಲಾಹನ ಕರುಣೆ ಬೇಡಿಕೊಳ್ಳುವ ಆವಶ್ಯಕತೆ ಇದೆ. ನಾನು ನನ್ನ ವಿಶ್ವಾಸವನ್ನು ಹೇಗೆ ಸಂರಕ್ಷಿಸಲಿ ಎಂದು ಯೋಚಿಸುತ್ತಾ ಇರಬೇಕಾದ ಆವಶ್ಯಕತೆ ಇದೆ.

ನಾನು ಪಠಿಸಿದ ಎರಡನೆಯ ವಚನದಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: ಅಲ್ಲಾಹನನ್ನು ಮರೆತು ಬಿಟ್ಟವರಂತೆ ನೀವು ಆಗಬೇಡಿರಿ. ತತ್ಫಲವಾಗಿ ಅವರು ತಮ್ಮನ್ನೇ ಮರೆತು ಬಿಡುವಂತೆ ಅಲ್ಲಾಹನು ಮಾಡುವನು. ನೆನಪಿಡಬೇಕಾದುದೇನೆಂದರೆ ಮನುಷ್ಯರು ಮೂರು ರೀತಿಗಳಲ್ಲಿ ಅಲ್ಲಾಹನನ್ನು ಮರೆತುಬಿಡುತ್ತಾರೆ. ಅಥವಾ ಅಲ್ಲಾಹನಿಂದ ದೂರವಾಗಿರುವ ಜನರು ಮೂರು ವಿಭಾಗದವರಾಗಿದ್ದಾರೆ. ಒಂದು ವಿಭಾಗದ ಜನರು ಅಲ್ಲಾಹನ ಅಸ್ತಿತ್ವವನ್ನೇ ನಂಬದವರಾಗಿದ್ದಾರೆ. ದೇವನೆಂಬುದೇ ಇಲ್ಲ ಎಂದು ಅವರು ಬಹಳ ಉದ್ದಟತನದಿಂದ ಹೇಳುತ್ತಾರೆ. ಇಂತಹ ಜನರು ಈಗ ಬಹಳ ಇದ್ದಾರೆ. ಅವರು ತಮ್ಮನ್ನು ವಿದ್ಯಾವಂತರೆಂದು ಹೇಳಿಕೊಳ್ಳುತ್ತಾರೆ. ಅವರು ತಮ್ಮ ವಿದ್ಯೆಯ ಬಗ್ಗೆ ಅಹಂಭಾವ ಹೊಂದಿರುತ್ತಾರೆ. ಅವರು ಸಂಪರ್ಕ ಮಾಧ್ಯಮಗಳ ಮತ್ತು ಇಂಟರ್‌ನೆಟ್ ಮೂಲಕ ಯುವ ಜನರಿಗೆ ಮತ್ತು ಅಪಕ್ವ ಮನೋಭಾವದ ಜನರಿಗೆ ತಮ್ಮ ಈ ವಿಚಾರಗಳ ವಿಷ ತುಂಬುತ್ತಿದ್ದಾರೆ.

ಎರಡನೆಯ ವಿಭಾಗದ ಜನರು ಸರ್ವಶಕ್ತನಾದ ದೇವನ ಬಗ್ಗೆ ದೃಢ ನಂಬಿಕೆ ಹೊಂದಿರುವುದಿಲ್ಲ. ಒಂದು ದಿನ ಅವನ ಮುಂದೆ ಹಾಜರಾಗಿ ತಮ್ಮ ಕೆಲಸಗಳ ಲೆಕ್ಕ ಒಪ್ಪಿಸಬೇಕಾಗಿದೆ ಎಂದು ಅವರು ನಂಬುವುದಿಲ್ಲ. ಒಬ್ಬ ದೇವನಿದ್ದಾನೆ ಅವನು ಲೋಕ ವ್ಯವಸ್ಥೆ ಚಲಾಯಿಸುತ್ತಾನೆ ಎಂದು ಅವರು ನಂಬುತ್ತಾರಾದರೂ ಅವರು ಆ ದೇವನ ಆಜ್ಞೆಗಳನ್ನು ಪಾಲಿಸುವುದಿಲ್ಲ.

ಇನ್ನು ಮೂರನೆಯ ವಿಭಾಗದವರು ಲೌಕಿಕ ಕೆಲಸಗಳಲ್ಲಿ ಎಷ್ಟು ಮುಳುಗಿರುತ್ತಾರೆಂದರೆ ಅವರು ಅಲ್ಲಾಹನನ್ನು ಮರೆತು ಬಿಟ್ಟಿದ್ದಾರೆ. ಅವರಿಗೆ ಯಾವಾಗಲಾದರೂ ನೆನಪಾದರೆ ನಮಾಝ್ ಮಾಡುತ್ತಾರೆ. ದುಆ ಸಹ ಮಾಡುತ್ತಾರೆ. ಆದರೆ ಅವರು ಕ್ರಮ ಬದ್ಧವಾಗಿ ಆರಾಧನೆ ಮಾಡುವುದಿಲ್ಲ. ಸತ್ಯವಿಶ್ವಾಸಿಗೆ ದಿನಂಪ್ರತಿ ಐದು ಹೊತ್ತು ನಮಾಝ್ ಮಾಡಬೇಕಾದುದು ಕಡ್ಡಾಯವಾಗಿದೆ ಎನ್ನುವುದರ ಬಗ್ಗೆ ಅವರಿಗೆ ಶ್ರದ್ಧೆ ಇಲ್ಲ. ಇಂತಹ ಜನರು ಅಲ್ಲಾಹನನ್ನು ಮರೆತುಬಿಟ್ಟಿರುತ್ತಾರೆ. ಅವರು ಎಂತಹ ಸ್ಥಿತಿಗೆ ತಲುಪುತ್ತಾರೆಂದರೆ ಅವರು ನೈತಿಕವಾಗಿ ಅಧಃಪತನ ಹೊಂದುತ್ತಾರೆ. ಆಧ್ಯಾತ್ಮಿಕ ಅವನತಿ ಸಹ ಉಂಟಾಗುತ್ತದೆ. ಕೊನೆಗೆ ಅವರು ಮಾನಸಿಕ ನೆಮ್ಮದಿ ಕಳೆದುಕೊಳ್ಳುತ್ತಾರೆ. ಲೌಕಿಕ ಕಾರ್ಯಗಳಲ್ಲಿ ತಮಗೆ ಲಾಭವಿದೆ ಎಂದು ಅವರು ಭಾವಿಸುತ್ತಾರೆ. ಆದುದರಿಂದ ಮೊದಲು ಲೌಕಿಕ ಕೆಲಸ ಮಾಡೋಣ ಅಲ್ಲಾಹನ ಹಕ್ಕುಗಳನ್ನು ಅನಂತರ ಈಡೇರಿಸಬಹುದು ಎಂದು ಅವರು ಯೋಚಿಸುತ್ತಾರೆ. ಯಾಕೆಂದರೆ ಅವರಿಗೆ ಲೌಕಿಕ ವ್ಯವಹಾರಗಳಲ್ಲಿ ಬೇಗನೇ ಸುಖ ಸಿಗುವುದಾಗಿ ಅವರಿಗೆ ತೋರುತ್ತದೆ. ಆದರೆ, ಇಂತಹ ಜನರು ತಮ್ಮನ್ನೇ ತಾವು ಮರೆತು ಬಿಡುವಂತೆ ಅಲ್ಲಾಹನು ಮಾಡುತ್ತಾನೆ ಎಂದು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳಿದ್ದಾನೆ. ಇಂತಹ ಜನರು ಎಂದೂ ಮಾನಸಿಕ ನೆಮ್ಮದಿಗಳಿಸಲಾರರು.

ಸತ್ಯವಿಶ್ವಾಸಿಗಳೊಂದಿಗೆ ಅಲ್ಲಾಹನು ಹೇಳುತ್ತಾನೆ: ನಿಮ್ಮಲ್ಲಿ ವಾಸ್ತವಿಕವಾದ ಭಯಭಕ್ತಿ ಇದ್ದರೆ, ನೀವು ಸತ್ಯವಿಶ್ವಾಸಿಗಳಾಗಿದ್ದರೆ, ನೀವು ದೇವನ ಅಸ್ತಿತ್ವವನ್ನು ನಂಬುವವರಾಗಿದ್ದರೆ, ಅವನ ಏಕತ್ವದಲ್ಲಿ ನಂಬಿಕೆ ಹೊಂದಿದವರಾಗಿದ್ದರೆ ಅಲ್ಲಾಹನು ವಿಧಿಸಿದ ಶರತ್ತುಗಳ ಪ್ರಕಾರ ಅವನು ನೀಡಿದ ಆಜ್ಞೆಗಳ ಪ್ರಕಾರ ನೀವು ಜೀವಿಸಿರಿ. ಅದು ಹೇಗೆಂದರೆ: ನಿಮ್ಮ ಪ್ರತಿಯೊಂದು ಕೆಲಸದ ಪರಿಣಾಮ ಹೇಗಾಗುವುದೆಂದು ಮುಂದಾಗಿ ನೋಡಿಕೊಳ್ಳಿರಿ. ನಿಮ್ಮ ಪ್ರತಿಯೊಂದು ಕೆಲಸ ಅಲ್ಲಾಹನು ನೋಡುತ್ತಾನೆಂದು ದೃಢವಾಗಿ ನಂಬಿರಿ.

ಮನುಷ್ಯನು ಈ ರೀತಿ ಯೋಚಿಸುವುದಾದರೆ ಅವನು ಮಾಡುವ ಪ್ರತಿಯೊಂದು ಕೆಲಸದ ರೀತಿಯಲ್ಲಿ ಬದಲಾವಣೆ ಉಂಟಾಗುವುದು. ಈ ಕಾರಣದಿಂದ ಅಲ್ಲಾಹನ ಅನುಗ್ರಹ ನನಗೆ ವರ್ಧಿಸುತ್ತಾ ಇದೆ ಎಂದು ಅವನು ಸ್ವತಃ ತಿಳಿದುಕೊಳ್ಳುವನು.

ಅಲ್ಲಾಹನು ಇಲ್ಲಿ ಫಾಸಿಖ್(ಆಜ್ಞೋಲ್ಲಂಘಕ) ಎಂಬ ಪದ ಬಳಸಿ ಸತ್ಯವಿಶ್ವಾಸಿಗಳೆಂದು ವಾದಿಸುವ ಜನರಿಗೆ ಸ್ಪಷ್ಟವಾಗಿ ಹೀಗೆ ಸಂದೇಶ ನೀಡಿದ್ದಾನೆ– ನೀವು ತಖ್ವ(ಭಯಭಕ್ತಿ) ಹೊಂದುವುದಿಲ್ಲವಾದರೆ, ನಾಳೆಯ ಬಗ್ಗೆ ಚಿಂತಿಸುವುದಿಲ್ಲವಾದರೆ, ಅಲ್ಲಾಹನ ಆಜ್ಞೆಗಳನ್ನು ಅನುಷ್ಠಿಸುವುದಿಲ್ಲವಾದರೆ, ನೀವು ಫಾಸಿಖ್‌ಗಳಾಗಿ ಗಣಿಸಲ್ಪಡುವಿರಿ. ನೀವು ಅಲ್ಲಾಹನ ಹದ್ದುಬಸ್ತುಗಳನ್ನು ಮೀರಿ ಹೋಗುವವರಾಗಿರುವಿರಿ, ನೀವು ಪಾಪ ಮಾಡುವವರಾಗಿರುವಿರಿ. ನೀವು ಅನುಸರಣೆಯಿಂದ ದೂರ ಸರಿದು ಸತ್ಯದಿಂದ ದೂರ ಸರಿಯುವವರಾಗಿರುವಿರಿ.

ಆದುದರಿಂದ ನಾವು ನಮ್ಮನ್ನು ಪರಿಶೀಲಿಸುವುದಿಲ್ಲವಾದರೆ, ಅಲ್ಲಾಹನು ನಿಶ್ಚಯಿಸಿದ ಮಾನದಂಡವನ್ನು ಬಳಸಿ ನಮ್ಮನ್ನು ನಾವು ಪರೀಕ್ಷಿಸುವುದಿಲ್ಲವಾದರೆ ಬಹಳ ಭಯಪಡಬೇಕಾದ ಅವಸ್ಥೆಯಾಗುತ್ತದೆ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ಪ್ರಥಮ ಖಲೀಫ) ಹೀಗೆ ಹೇಳುತ್ತಾರೆ: "ಕಷ್ಟಗಳು ಮನುಷ್ಯನಿಗೆ ಬರುತ್ತವೆ. ಅವನಿಗೆ ಅನೇಕ ಆವಶ್ಯಕತೆಗಳಿರುತ್ತವೆ. ಆಹಾರದ ಆವಶ್ಯಕತೆ ಸಹ ಇರುತ್ತದೆ. ಅವನಿಗೆ ಸ್ನೇಹಿತರೂ ಶತ್ರುಗಳೂ ಇರುತ್ತಾರೆ. ಈ ಎಲ್ಲ ಪರಿಸ್ಥಿತಿಗಳಲ್ಲೂ ಭಯಭಕ್ತಿ ಹೊಂದಿದ ಸತ್ಯವಿಶ್ವಾಸಿ ಹೇಗಿರುತ್ತಾನೆಂದರೆ ಅವನು ಅಲ್ಲಾಹನನ್ನು ಯಾವಾಗಲೂ ನೆನಪಿನಲ್ಲಿಡುತ್ತಾನೆ. ಅವನು ಸ್ನೇಹಿತರ ಮೇಲೆ ಮತ್ತು ಲಾಭಕರ ವಸ್ತುಗಳ ಮೇಲೆ ಅಲ್ಲಾಹನಿಗೆ ಆದ್ಯತೆ ನೀಡುತ್ತಾನೆ."

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು ಮತ್ತೂ ಹೇಳುತ್ತಾರೆ: "ಸ್ನೇಹಿತನ ಮೇಲೆ ಭರವಸೆ ಇಡುವುದಾದರೆ ಆ ಸ್ನೇಹಿತ ಕಷ್ಟಬರುವ ಮೊದಲೇ ಸತ್ತು ಹೋಗಬಹುದು ಅಥವಾ ಅವನು ಸ್ವತಃ ಕಷ್ಟಕ್ಕೆ ಗುರಿಯಾಗಿ ಸಹಾಯ ಮಾಡಲು

ಸಮರ್ಥನಾಗದಿರಬಹುದು. ಒಬ್ಬ ಸರಕಾರಿ ಅಧಿಕಾರಿಯ ಮೇಲೆ ಭರವಸೆ ಇಟ್ಟರೆ ಅವನಿಗೆ ವರ್ಗಾವಣೆ ಆಗಿ ಅವನು ಸಹಾಯಮಾಡಲು ಸಾಧ್ಯವಾಗದಿರುವ ಪರಿಸ್ಥಿತಿ ಉಂಟಾಗಬಹುದು. ಸಂಬಂಧಿಕರ ಮೇಲೆ ಭರವಸೆ ಇಡುವುದಾದರೆ ಅವರು ಸಹ ಕಷ್ಟಕ್ಕೆ ಗುರಿಯಾಗಿ ಸಹಾಯ ನೀಡಲು ಸಮರ್ಥರಾಗದಿರಬಹುದು. ಆದುದರಿಂದ ಪ್ರತಿಯೊಂದು ಕ್ಷಣದಲ್ಲೂ ಅಲ್ಲಾಹನೊಂದಿಗಿರುವ ಸಂಬಂಧ ಮುರಿದು ಹಾಕಬಾರದು. ಯಾಕೆಂದರೆ ನಾವು ಜೀವಿಸಿರುವಾಗಲೂ ಮೃತರಾಗುವಾಗಲೂ ಅಲ್ಲಾಹನು ನಮ್ಮ ಜೊತೆಗಿರುತ್ತಾನೆ. ಅಲ್ಲಾಹನೊಂದಿಗೆ ಸಂಬಂಧ ಮುರಿದು ಹಾಕಿದವರ ಹಾಗೆ ನೀವು ಆಗಬೇಡಿರೆಂದು ಅಲ್ಲಾಹನು ಹೇಳುತ್ತಾನೆ. ನೀವು ಸಂಬಂಧ ಕಡಿದು ಹಾಕಿದರೆ ದುಃಖಗಳಿಂದ ನೀವು ಸುರಕ್ಷಿತರಾಗಲಾರಿರಿ, ನೀವು ಸುಖ ಪಡೆಯಲಾರಿರಿ. ಎಲ್ಲ ಕಡೆಗಳಿಂದ ನೀವು ಹೀನೈಸಲ್ಪಡುವಿರಿ, ನಿಮ್ಮ ಸ್ನೇಹಿತರಿಂದ ಸಹ ನೀವು ಅಪಮಾನಿಸಲ್ಪಡಬಹುದು.”

ಅಲ್ಲಾಹನೊಂದಿಗೆ ಸಂಬಂಧ ವಿಚ್ಛೇಧಿಸುವವರು ಯಾರು? ಅವರು ಫಾಸಿಖ್(ಆಜ್ಞೆ ಉಲ್ಲಂಘಿಸುವವರು) ಫಾಜಿರ್(ದುಷ್ಕರ್ಮಿಗಳು) ಆಗುತ್ತಾರೆ. ಅವರಲ್ಲಿ ಸತ್ಯವಿಶ್ವಾಸ ಇರುವುದಿಲ್ಲ. ಅವರಿಗೆ ಅಲ್ಲಾಹನ ಸೃಷ್ಟಿಗಳ ಬಗ್ಗೆ ಕಾರುಣ್ಯವಿರುವುದಿಲ್ಲ. ಅವರು ಅಲ್ಲಾಹನ ಹಕ್ಕುಗಳನ್ನು ಈಡೇರಿಸುವುದಿಲ್ಲ. ಅವನ ದಾಸರ ಹಕ್ಕುಗಳನ್ನು ಈಡೇರಿಸುವುದಿಲ್ಲ. ಆದುದರಿಂದ ನಮ್ಮ ಪೈಕಿ ಪ್ರತಿಯೊಬ್ಬನು ನಮ್ಮ ಪ್ರತಿಯೊಂದು ಕೆಲಸವನ್ನು ಅಲ್ಲಾಹನ ಆಜ್ಞೆ ಪ್ರಕಾರ ಮಾಡಲು ಪ್ರಯತ್ನಿಸಬೇಕಾಗಿದೆ. ನಮ್ಮ ತಾತ್ಕಾಲಿಕ ಲಾಭವನ್ನು ಪರಿಗಣಿಸದೆ ನಮ್ಮ ನಾಳೆಯ ಬಗ್ಗೆ ದೃಷ್ಟಿ ಇರಿಸಬೇಕು. ಅಲ್ಲಾಹನು ನಮಗೆ ಹೀಗೆ ಮಾಡಲು ಭಾಗ್ಯ ನೀಡಲಿ – ಆಮೀನ್.

---------------*****--------------

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 06-03-2015.*

Summarized by ***Nazarath Nashr-O-Isha'ath, Qadian***

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team** for **Nazarath Nashr-O-Isha'ath, Qadian**

***Email***: *khutuba.kannada@gmail.com*